# ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಶಿವಮೊಗ್ಗ.

"ಮಲೆನಾಡ ಸಿರಿ",ಸಾಗರ ರಸ್ತೆ,ಶಿವಮೊಗ್ಗ-577 201

ದೂರವಾಣಿ ಸಂ: 08182–257862 email:madbsecretary@gmail.com ಫ್ಯಾಕ್ಸ್ ಸಂ: 08182–257631

**2016–17ನೇ ಸಾಲಿನ ಪ್ರಥಮ ಸರ್ವ ಸದಸ್ಯರ ಸಾಮಾನ್ಯ ಸಭೆಯು ದಿನಾಂಕ:29.04.2016 ರಂದು ಮಂಡಳಿಯ ಮಾನ್ಯ ಅಧ್ಯಕ್ಷರಾದ ಕು:ಬಿ.ಸಿ. ಗೀತಾ ರವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಸಭಾಂಗಣ, ಕೊಠಡಿ ಸಂ:334 ವಿಧಾನ ಸೌಧ, ಬೆಂಗಳೂರು ಇಲ್ಲಿ ಜರುಗಿದ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಸಾಮಾನ್ಯ ಸಭೆಯ ಸಭಾ ನಡವಳಿಗಳು.**

********

**ಸಭೆಗೆ ಹಾಜರಾದ ಸದಸ್ಯರುಗಳ ಹಾಜರಾತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.**

ಪ್ರಥಮವಾಗಿ ಮಂಡಳಿಯ ಉಪಕಾರ್ಯದರ್ಶಿಯವರು ಸಭೆಗೆ ಆಗಮಿಸಿದ ಮಾನ್ಯ ಸದಸ್ಯರುಗಳನ್ನು, ಮಂಡಳಿಯ ಮಾನ್ಯ ಅಧ್ಯಕ್ಷರನ್ನು ಮತ್ತು ಮಂಡಳಿಯ ಕಾರ್ಯದರ್ಶಿಯವರನ್ನು ಹಾಗೂ ಅಧಿಕಾರಿ ವರ್ಗದವರನ್ನು ಹಾರ್ದಿಕವಾಗಿ ಸ್ವಾಗತಿಸಿ ಸಭಾ ವಿಷಯಸೂಚಿಯಂತೆ ಸಭೆಯ ಕಲಾಪವನ್ನು ನಡೆಸಿಕೊಡಲು ಮಾನ್ಯ ಅಧ್ಯಕ್ಷರಿಗೆ ಕೋರಿದರು. ಅದಕ್ಕೆ ಮಾನ್ಯ ಅಧ್ಯಕ್ಷರು ಒಪ್ಪಿಗೆ ಸೂಚಿಸಿದ ನಂತರ,

ಮಂಡಳಿಯ ಕಾರ್ಯದರ್ಶಿಯವರಾದ ಶ್ರೀ ಜಿ.ವಿ.ಸುದರ್ಶನ್ ರವರು ಸಭಾ ವಿಷಯ ಸೂಚಿಯನ್ವಯ ಈ ಕೆಳಕಂಡಂತೆ ವಿಷಯಗಳನ್ನು ಸಭೆಗೆ ಮಂಡಿಸಿದರು.

**ವಿಷಯ:1: ದಿನಾಂಕ:12.06.2015ರಂದು ನಡೆದ ಮಂಡಳಿ ಸಭೆಯ ನಡವಳಿಗಳ ಮೇಲಿನ ಅನುಸರಣಾ ವರದಿ.**

| ಪ್ಯಾರಾ ಸಂ. | ತೀರ್ಮಾನ | ಅನುಸರಣೆ |
|---|---|---|
| 1 | ದಿನಾಂಕ:12.06.2015ರಂದು ನಡೆದ ಸಭಾ ನಡವಳಿಗಳ ಮೇಲಿನ ಅನುಸರಣಾ ವರದಿ. | ದಿನಾಂಕ:12.06.2015ರಂದು ನಡೆದ ಮಂಡಳಿಯ ಸಭಾ ನಡವಳಿಗಳಿಗೆ ಮಂಡಳಿಯಿಂದ ತೆಗೆದುಕೊಂಡ ಅನುಸರಣಾ ಕ್ರಮಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| 2 | 2015–16ನೇ ಸಾಲಿನ ಆಡಳಿತ ವರದಿ ಅನುಮೋದಿಸುವ ಕುರಿತು. | 2015–16 ನೇ ಸಾಲಿನ ಮಂಡಳಿಯ ವಾರ್ಷಿಕ ಆಡಳಿತ ವರದಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| 3 | ವಿಷಯ–3: 2015–16 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಬಗ್ಗೆ. | ಅ) ಮಾನ್ಯ ಯೋಜನಾ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಗತಿ ಪರಿಶೀಲನಾ ಸಭೆಯ ನಿರ್ಣಯ (2) ರಂತೆ 2015–16ನೇ ಸಾಲಿನ ಮಂಡಳಿಯ ವಾರ್ಷಿಕ ಕ್ರಿಯಾ ಯೋಜನೆಯನ್ನು ಶೇ.50 ರಷ್ಟು ಹೆಚ್ಚಿನ ಕಾಮಗಾರಿಗಳ ಪ್ರಸ್ತಾವನೆ ಪಡೆದು ಕಾರ್ಯಕ್ರಮ ರೂಪಿಸಲು ಸಭೆಯಲ್ಲಿ ನಿರ್ಣಯಿಸಿದಂತೆ ಬಂಡವಾಳ ವೆಚ್ಚ ಲೆಕ್ಕ ಶೀರ್ಷಿಕೆಯಡಿ ರೂ.38.25 ಲಕ್ಷಗಳನ್ನು ಮಾನ್ಯ ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಸಮನಾಗಿ ಹಂಚಿಕೆ ಮಾಡಲು ಮತ್ತು ವಿ.ಘ.ಯೋ / ಗಿ.ಉ.ಯೋ. ಲೆಕ್ಕ ಶೀರ್ಷಿಕೆಯಡಿ ಅನುದಾನವನ್ನು ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಅಧಿನಿಯಮ, 2013ರಂತೆ ಜನಸಂಖ್ಯೆ |

| | | |
|---|---|---|
| | | ಆಧಾರದ ಮೇಲೆ ವಿಧಾನ ಸಭಾ ಕ್ಷೇತ್ರಗಳಿಗೆ ಮಾತ್ರ ಹಂಚಿಕೆ ಮಾಡುವುದರೊಂದಿಗೆ 2015–16ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಪುಟ 2 ರ ಕೋಷ್ಟಕದಲ್ಲಿ ತಿಳಿಸಿರುವಂತೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.<br>ಆ) ಮಾನ್ಯ ಯೋಜನಾ ಸಚಿವರ ಟಿಪ್ಪಣಿ ಸಂ: ಯೋಸಾಮಾಜೈವಿಸ:ಗ್ಯಕ:789:2013 ದಿನಾಂಕ:17.07.2013ರ ಸೂಚನೆಯಂತೆ 65 ವಿಧಾನಸಭಾ ಕ್ಷೇತ್ರಗಳಿಗೆ 82.5%, ಸರ್ಕಾರದ ವಿವೇಚನಾ ನಿಧಿಗೆ ಶೇಕಡಾ 5%, ಅಧ್ಯಕ್ಷರ ವಿವೇಚನಾ ನಿಧಿಗೆ ಶೇಕಡಾ 5% ಹಾಗೂ ಮಂಡಳಿಯ ಕಾರ್ಯಕ್ರಮಗಳಿಗೆ ಶೇಕಡಾ 2.5% ರಂತೆ ಮತ್ತು ಅಧ್ಯಕ್ಷರ ವಿವೇಚನಾ ನಿಧಿಗೆ ಹೆಚ್ಚುವರಿಯಾಗಿ ಶೇಕಡಾ 5% ರಷ್ಟು ಅನುದಾನವನ್ನು ಹಂಚಿಕೆ ಮಾಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| 4 | 2015–16ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಶೇ.50% ರಷ್ಟು ಹೆಚ್ಚಿಸಿ ಅನುಮೋದಿಸುವ ಕುರಿತು. | 2015–16ನೇ ಸಾಲಿನ ಆಯವ್ಯಯದಲ್ಲಿ ಮಂಡಳಿಗೆ ಹಂಚಿಕೆ ಮಾಡುವ ಅನುದಾನಕ್ಕೆ ಶೇ.50% ರಷ್ಟು ಹೆಚ್ಚುವರಿಯಾಗಿ ಕಾರ್ಯಕ್ರಮವನ್ನು ಪಡೆದು ವಾರ್ಷಿಕ ಕ್ರಿಯಾ ಯೋಜನೆ ರೂಪಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| 5 | ಸಮುದಾಯ ಭವನ ಕಾಮಗಾರಿಗಳನ್ನು ಹೊರತು ಪಡಿಸಿ ರಸ್ತೆ ಮತ್ತು ಕಾಲುಸೇತುವೆ ಕಾಮಗಾರಿಗಳನ್ನು ಆದ್ಯತೆ ಮೇಲೆ ಅನುಷ್ಠಾನಗೊಳಿಸುವ ಬಗ್ಗೆ. | 2015–16ನೇ ಸಾಲಿನ ಮಂಡಳಿಯ ಕ್ರಿಯಾ ಯೋಜನೆಯಲ್ಲಿ ಸಮುದಾಯ ಭವನ ಕಾಮಗಾರಿಗಳನ್ನು ಹೊರತು ಪಡಿಸಿ ರಸ್ತೆ ಮತ್ತು ಕಾಲುಸೇತುವೆ ಕಾಮಗಾರಿಗಳನ್ನು ಆದ್ಯತೆ ಮೇಲೆ ಅನುಷ್ಠಾನಗೊಳಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |

ಮಂಡಳಿಯ ಕಾರ್ಯದರ್ಶಿಯವರು ದಿನಾಂಕ:12.06.2015 ರಂದು ನಡೆದ ಮಂಡಳಿಯ ಸರ್ವ ಸದಸ್ಯರ ಸಭಾ ನಡವಳಿಗೆ ಮೇಲೆ ತೆಗೆದುಕೊಂಡ ಕ್ರಮವನ್ನು ಸಭೆಗೆ ವಿವರಿಸಿದರು. ಸಭೆಯಲ್ಲಿ ಎಲ್ಲಾ ಸರ್ವ ಸದಸ್ಯರು ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿದರು. ಅದಕ್ಕೆ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

**ನಿರ್ಣಯ:1:–** ಮಂಡಳಿಯ ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದ ಅಂಶಗಳನ್ನು ಆಲಿಸಿದ ನಂತರ ದಿನಾಂಕ:12.06.2015ರಂದು ನಡೆದ ಮಂಡಳಿಯ ಸಭಾ ನಡವಳಿಗಳಿಗೆ ಮಂಡಳಿಯಿಂದ ತೆಗೆದುಕೊಂಡ ಅನುಸರಣಾ ಕ್ರಮಗಳನ್ನು ಸರ್ವ ಸದಸ್ಯರ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ:2:– ಮಂಡಳಿಯ 2015–16ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಅನುಮೋದಿಸುವ ಕುರಿತು.**

2015–16ನೇ ಸಾಲಿನ ಮಂಡಳಿಯ ಕಾರ್ಯಕ್ರಮಗಳ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿ ಹಾಗೂ ಸಿಬ್ಬಂದಿ ಮತ್ತು ವಾರ್ಷಿಕ ಲೆಕ್ಕಪತ್ರಗಳ ವಿವರಗಳನ್ನೊಳಗೊಂಡ ಮಂಡಳಿಯ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಅನುಮೋದನೆಗೆ ಮಂಡಿಸಲಾಯಿತು.

**ನಿರ್ಣಯ:2:–** 2015–16ನೇ ಸಾಲಿನ ಮಂಡಳಿಯ ವಾರ್ಷಿಕ ಆಡಳಿತ ವರದಿಯನ್ನು ಸರ್ವ ಸದಸ್ಯರ ಸಾಮಾನ್ಯ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯ:-3:- 2016-17ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಕುರಿತು.

2016-17ನೇ ಸಾಲಿನ ಮಂಡಳಿಯ ಆಯವ್ಯಯ ಪ್ರಸ್ತಾವನೆ ಬಗ್ಗೆ.

2016-17ನೇ ಸಾಲಿನ ಮಂಡಳಿಯ ಆಯವ್ಯಯ ಪ್ರಸ್ತಾವನೆಯನ್ನು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ನಿಮಯಾವಳಿ, 1993ರ ನಿಮಯ 6 ಹಾಗೂ 8 ರ ಮೇರೆಗೆ ಒಟ್ಟು ರೂ.25000.00 ಲಕ್ಷಗಳಿಗೆ ಈ ಕೆಳಕಂಡಂತೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ವಿವರ | ಮೊತ್ತ |
|---|---|---|
| 1 | ಮಂಡಳಿ ಹೊಸ ಕಾಮಗಾರಿಗಳಿಗೆ | 6500.00 |
| 2 | ವಿಶೇಷ ಘಟಕ ಯೋಜನ | 4543.00 |
| 3 | ಗಿರಿಜನ ಉಪಯೋಜನೆ | 1130.00 |
| 4 | ಆಡಳಿತ ವೆಚ್ಚಕ್ಕೆ | 170.00 |
| 5 | ನಬಾರ್ಡ್ | 8600.00 |
| 6 | ವಿಶಿಷ್ಟ ಕಾರ್ಯಕ್ರಮಗಳು - ಶುದ್ಧ ಕುಡಿಯುವ ನೀರಿನ ಘಟಕ, ಸ್ವತಂತ್ರ ವಿದ್ಯುತ್ ಘಟಕ, ದ್ರವ/ಘನ ತ್ಯಾಜ್ಯ ಶುದ್ಧೀಕರಣ ಘಟಕ ಸ್ಥಾಪನೆ ಮತ್ತು ಸೋಲಾರ್ ದೀಪ ಅಳವಡಿಕೆ ಮುಂತಾದವುಗಳು. | 1500.00 |
| 7 | ಆದ್ಯತೆ ಮೇರೆ ಮಂಡಳಿ ವ್ಯಾಪ್ತಿಯ ಆಯ್ದ ನಿವೇಶನಗಳಲ್ಲಿ ತೂಗು ಸೇತುವೆ ಹಾಗೂ ಕಾಲು ಸೇತುವೆ ನಿರ್ಮಾಣ. | 2557.00 |
| | **ಒಟ್ಟು** | **25000.00** |

2016-17ನೇ ಸಾಲಿಗಾಗಿ ಸರ್ಕಾರದ ಆಯವ್ಯಯದಲ್ಲಿ ಹಂಚಿಕೆ ಮಾಡಲಾಗಿರುವ ಅನುದಾನದ ವಿವರ.

2016-17ನೇ ಸಾಲಿಗಾಗಿ ಸರ್ಕಾರದ ಆಯವ್ಯಯದಲ್ಲಿ ಒಟ್ಟು ರೂ.5000.00 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಲಾಗಿದ್ದು, ಶೀರ್ಷಿಕೆವಾರು ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ವಿವರ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | ಲೆಕ್ಕ ಶೀರ್ಷಿಕೆ ಸಂ. 2515-00-103-0-02 | |
| ಅ | 101 - ಸಹಾಯಾನುದಾನ | 41.00 |
| ಆ | 132 - ಬಂಡವಾಳ ವೆಚ್ಚಗಳು | 3751.00 |
| ಇ | 422 - ವಿಶೇಷ ಘಟಕ ಯೋಜನೆ | 859.00 |
| ಈ | 423 - ಗಿರಿಜನ ಉಪಯೋಜನೆ | 349.00 |
| | **ಒಟ್ಟು** | **5000.00** |

2016–17ನೇ ಸಾಲಿಗೆ ಸರ್ಕಾರವು ಮೇಲಿನಂತೆ ಹಂಚಿಕೆ ಮಾಡಿರುವ ರೂ.5000.000 ಲಕ್ಷಗಳೊಂದಿಗೆ ಮಂಡಳಿಯಲ್ಲಿ ಲಭ್ಯವಿರುವ ಆರಂಭ ಶಿಲ್ಕು ರೂ.927.420 ಲಕ್ಷ ಅನುದಾನವು ಸೇರಿದಂತೆ ಒಟ್ಟು ರೂ.5927.420 ಲಕ್ಷಗಳು ಈ ಕೆಳಕಂಡಂತೆ ವಿವಿಧ ಶೀರ್ಷಿಕೆಯಡಿ ಲಭ್ಯವಿರುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ವಿವರ | 01.04.2016ರಲ್ಲಿದ್ದಂತೆ ಆರಂಭಿಕ ಶಿಲ್ಕು | 2016–17ನೇ ಸಾಲಿಗೆ ಸರ್ಕಾರವು ನಿಗದಿಪಡಿಸಿದ ಅನುದಾನ | 2016–17ನೇ ಸಾಲಿಗೆ ಲಭ್ಯವಿರುವ ಒಟ್ಟು ಅನುದಾನ |
|---|---|---|---|---|
| 1 | ಸಹಾಯಾನುದಾನ | 63.849 | 41.000 | 104.849 |
| 2 | ಬಂಡವಾಳ ವೆಚ್ಚಗಳು | 802.160 | 3751.000 | 4553.160 |
| 3 | ವಿಶೇಷ ಘಟಕ ಯೋಜನೆ | 59.816 | 859.000 | 918.816 |
| 4 | ಗಿರಿಜನ ಉಪಯೋಜನೆ | 1.595 | 349.000 | 350.595 |
| | ಒಟ್ಟು | 927.420 | 5000.000 | 5927.420 |

2016–17ನೇ ಸಾಲಿನಲ್ಲಿ ಮೇಲಿನಂತೆ ಲಭ್ಯವಿರುವ ಒಟ್ಟು ರೂ.5927.420 ಲಕ್ಷಗಳ ಅನುದಾನಕ್ಕೆ ಈ ಕೆಳಕಂಡಂತೆ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ.

| ಕ್ರ.ಸಂ. | ಲೆಕ್ಕ ಶೀರ್ಷಿಕೆ | ಮುಂದುವರೆದ ಕಾರ್ಯಕ್ರಮಗಳು | ಹೊಸ ಕಾರ್ಯಕ್ರಮಗಳು | ಒಟ್ಟು |
|---|---|---|---|---|
| 1 | ಬಂಡವಾಳ ವೆಚ್ಚ | 2356.510 | 2196.650 | 4553.160 |
| 2 | ವಿಶೇಷ ಘಟಕ ಯೋಜನೆ | 420.530 | 498.286 | 918.816 |
| 3 | ಗಿರಿಜನ ಉಪಯೋಜನೆ | 156.590 | 194.005 | 350.595 |
| 4 | ಆಡಳಿತ ವೆಚ್ಚ | 0.000 | 104.849 | 104.849 |
| | ಒಟ್ಟು | 2933.630 | 2993.790 | 5927.420 |

ಮೇಲ್ಕಂಡಂತೆ ಈ ವರ್ಷದ ಕ್ರಿಯಾ ಯೋಜನೆಯನ್ನು ರೂಪಿಸಲಾಗಿರುತ್ತದೆ. ಕ್ರಿಯಾ ಯೋಜನೆಯನ್ನು 1:1 ಅನುಪಾತದಲ್ಲಿ ತಯಾರಿಸಲಾಗಿದೆ. 1:1.5 ಅನುಪಾತದಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ. ಮುಂಬರುವ ಎಂ.ಎಂ.ಆರ್. ಪ್ರಗತಿ ಪರಿಶೀಲನಾ ಸಭೆಯಲ್ಲಿ ಚರ್ಚೆಯಾದ ನಂತರ ಅಂತಿಮಗೊಳಿಸುವುದಾಗಿ, ಸರ್ಕಾರದ ಕಾರ್ಯದರ್ಶಿಗಳು ತಿಳಿಸಿರುವ ಮೇರೆಗೆ ಶೇ.1:1 ಅನುಪಾತದಲ್ಲಿ ಕ್ರಿಯಾ ಯೋಜನೆಯನ್ನು ರೂಪಿಸಲು ಸರ್ಕಾರದ ನಿರ್ದೇಶನವಿರುವ ಕಾರಣ 1:1 ಅನುಪಾತದಲ್ಲಿ ಮಾತ್ರ ಕ್ರಿಯಾ ಯೋಜನೆಯ ಪ್ರಸ್ತಾವನೆಯನ್ನು ತಯಾರಿಸಲಾಗಿರುತ್ತದೆ. ಸರ್ಕಾರದಿಂದ ಅನುಮೋದನೆ ಬಂದ ಮೇಲೆ ಹೆಚ್ಚಿಗೆ ಉಳಿದ ಶೇ.50% ಕ್ಕೆ ಮತ್ತೆ ಮಂಡಳಿಯ ಎಲ್ಲಾ ಸದಸ್ಯರುಗಳಿಗೆ ಪತ್ರ ಮೂಲಕ ತಿಳಿಸಲಾಗುವುದೆಂದು ಮಂಡಳಿಯ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು.

ಶ್ರೀ ಚಿಕ್ಕಮಾದು, ಮಾನ್ಯ ಶಾಸಕರು ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ಇವರು ಮಾತನಾಡುತ್ತಾ ಈಗ 50.00 ಕೋಟಿಗೆ ಆಯವ್ಯಯವನ್ನು ಘೋಷಣೆ ಮಾಡಿದ್ದಾರೆ. ಅಷ್ಟು ಮಾತ್ರ ಬಿಡುಗಡೆ ಮಾಡುತ್ತಾರೆ. ಈ ಸಾಲಿನ ಆಯವ್ಯಯ ರೂ.50.00 ಕೋಟಿಗೂ ಒಂದೇ ಸಾರಿ ಕ್ರಿಯಾ ಯೋಜನೆಯ ಪ್ರಸ್ತಾವನೆಯನ್ನು ತೆಗೆದುಕೊಂಡು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ಕಂತುಗಳಿಗೆ ತಕ್ಕಂತೆ ಪ್ರತೀ ಕ್ಷೇತ್ರಗಳ ಪ್ರಸ್ತಾವನೆಯ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಸಭೆಯನ್ನು ಕೋರಿದರು.

ಅದಕ್ಕೆ ಮಾನ್ಯ ಸಭಾಧ್ಯಕ್ಷರು ಒಪ್ಪಿಗೆ ನೀಡಿದರು.

ಶ್ರೀ ಮೊಯಿದ್ದೀನ್ ಬಾವ, ಮಾನ್ಯ ಶಾಸಕರು, ಮಂಗಳೂರು (ನಗರ ಉತ್ತರ) ಇವರು ಅಧ್ಯಕ್ಷರನ್ನುದ್ದೇಶಿಸಿ ಮಾತನಾಡುತ್ತಾ 2016–17ನೇ ಸಾಲಿನಲ್ಲಿ ಮಂಡಳಿಗೆ ಹಂಚಿಕೆ ಮಾಡಿರುವ ರೂ.50.00 ಕೋಟಿ ಹಾಗೂ ಮಂಡಳಿಯಲ್ಲಿ ಲಭ್ಯವಿರುವ ಆರಂಭ ಶಿಲ್ಕು ರೂ.9.27 ಕೋಟಿ ಅನುದಾನವು ಸೇರಿ ಒಟ್ಟು ರೂ.59.27 ಕೋಟಿ ಇರುತ್ತದೆ. 2016–17ನೇ ಸಾಲಿಗೆ ಲಭ್ಯವಿರುವ ರೂ.59.27 ಕೋಟಿ ಅನುದಾನಕ್ಕೆ ಮುಂದುವರೆದ ಕಾಮಗಾರಿಗಳಿಗೆ ರೂ.29.29 ಕೋಟಿಗೆ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ. ಪ್ರತಿ ವರ್ಷ ಮಂಡಳಿಯಿಂದ ಅನುದಾನಕ್ಕೆ ತಕ್ಕಂತೆ ಪ್ರಸ್ತಾವನೆ ಪಡೆದು ಮಂಜೂರು ಮಾಡುತ್ತಿರುವಾಗ ಕಾಮಗಾರಿಗಳು ಪೂರ್ಣಗೊಳ್ಳುತ್ತವೆ. ಅಂದಮೇಲೆ ಈ ಮುಂದುವರೆದ ಕಾಮಗಾರಿಗಳು ಉಳಿಯಲು ಹೇಗೆ ಸಾಧ್ಯವೆಂದು ಕೇಳಿದರು.

ಈ ಕುರಿತು ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಕಳೆದ ವರ್ಷ ಕ್ರಿಯಾ ಯೋಜನೆಯನ್ನು 1:1.5 ಅನುಪಾತದಲ್ಲಿ ರೂಪಿಸಲಾಗಿತ್ತು. ಆ ವರ್ಷ ಶೇ.50% ಜಾಸ್ತಿ ಆಗಿರುವುದು ಈ ವರ್ಷದ ಮುಂದುವರೆದ ಕಾಮಗಾರಿಗಳಾಗಿ ಉಳಿದಿರುತ್ತವೆಂದು ಹೇಳುತ್ತಾ ಈ ಸಾರಿ ಅಂದರೆ 2016–17ನೇ ಸಾಲಿಗೆ 1:1 ಅನುಪಾತದಲ್ಲಿ ಕ್ರಿಯಾ ಯೋಜನೆಯನ್ನು ಸರ್ಕಾರದ ನಿರ್ದೇಶನದಂತೆ ರೂಪಿಸಿರುವುದಾಗಿ ಸಭೆಗೆ ತಿಳಿಸಿದರು.

ಶ್ರೀ ಮೊಯಿದ್ದೀನ್ ಬಾವ, ಮಾನ್ಯ ಶಾಸಕರು, ಮಂಗಳೂರು (ನಗರ ಉತ್ತರ) ಮಾತನಾಡುತ್ತಾ 2016–17ನೇ ಸಾಲಿಗೆ ಮುಂದುವರೆದ ಕಾಮಗಾರಿಗಳಿಗೆ ರೂ.29.29 ಕೋಟಿ ಅನುದಾನ ಲಭ್ಯವಿದ್ದು, ಯಾರ ಕ್ಷೇತ್ರದಲ್ಲಿ ಹೆಚ್ಚಿನ ಮುಂದುವರೆದ ಕಾಮಗಾರಿಗಳಿವೆಯೆಂದರೆ ಅವರಿಗೆ ಹೆಚ್ಚಿನ ಅನುದಾನ ನೀಡಲಾಗುತ್ತದೆಂದರು. ಅದಕ್ಕೆ ಮಾನ್ಯ ಕಾರ್ಯದರ್ಶಿಯವರು ಉತ್ತರಿಸುತ್ತಾ ಆ ರೀತಿ ನೀಡಲಾಗುವುದಿಲ್ಲ. ಕಳೆದ ಸಾರಿ ನಾವು ಎಲ್ಲಾ ಕ್ಷೇತ್ರಗಳ ಶಾಸಕರಿಂದಲೂ ಸಮನಾಗಿ 1:1.5 ಅನುಪಾತದಲ್ಲಿಯೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದರು. ಈ ಸಾರಿ 1:1 ಅನುಪಾತದಲ್ಲಿ ಕಾರ್ಯಕ್ರಮ ತೆಗೆದುಕೊಂಡಿದ್ದು ಪ್ರಗತಿ ಸಾಧಿಸಲು ಕಷ್ಟವಾಗುತ್ತದೆಂದು, 1:1.5 ಅನುಪಾತದಲ್ಲಿ ಕ್ರಿಯಾ ಯೋಜನೆ ರೂಪಿಸಲು ಸರ್ಕಾರಕ್ಕೆ ಸಲ್ಲಿಸಲು ಎಲ್ಲಾ ಸದಸ್ಯರ ಅನುಮತಿಯನ್ನು ಕೋರಿದರು. ಇದಕ್ಕೆ ಸಭೆಯಲ್ಲಿನ ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ನೀಡಿದರು.

**ನಿರ್ಣಯ3:– 2016–17ನೇ ಸಾಲಿಗೆ ಮುಂದುವರೆದ ಕಾರ್ಯಕ್ರಮಕ್ಕೆ 2933.630 ಲಕ್ಷಗಳ ಕ್ರಿಯಾ ಯೋಜನೆಗೆ ಮತ್ತು ಹೊಸ ಕಾಮಗಾರಿಗಳ ಅನುಷ್ಠಾನಕ್ಕೆ ಲಭ್ಯವಿರುವ ಅನುದಾನ ರೂ.2993.790 ಲಕ್ಷಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

ಶ್ರೀ ಅರೆಬೈಲು ಶಿವರಾಮ ಹೆಬ್ಬಾರ್, ಮಾನ್ಯ ಶಾಸಕರು, ಯಲ್ಲಾಪುರ ಇವರು ಮಾತನಾಡುತ್ತಾ ತಾವು ಟಿಪ್ಪಣಿಯಲ್ಲಿ ವಿವರಿಸಿರುವಂತೆ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಅಧಿನಿಯಮ, 2013 ಅಧ್ಯಾಯ 2ನೇ ಪ್ಯಾರಾದ 7 ಮತ್ತು 7ಎ ರಡಿಯಲ್ಲಿ ಇರುವಂತೆ ಎಸ್.ಸಿ/ಎಸ್.ಟಿ ಉಪಯೋಜನೆ ಅನುದಾನವನ್ನು 2001ರ ಜನಗಣತಿಯ ಆಧಾರದ ಮೇಲೆ ಕ್ಷೇತ್ರವಾರು, ಹೋಬಳಿವಾರು ಜನಸಂಖ್ಯೆ ಹೇಳಿರುತ್ತೀರಿ. 2001 ಎಲ್ಲಿ 2011 ಎಲ್ಲಿ. ನೀವು 2011ರ ಜನಗಣತಿ ಆಧಾರ ಮೇಲೆ ಮಾಡಿ. ಜನಸಂಖ್ಯೆ ಜಾಸ್ತಿ ಇದೆಯೆಂದರು.

ಶ್ರೀ ಡಿ.ಜಿ.ಶಾಂತನಗೌಡ, ಮಾನ್ಯ ಶಾಸಕರು, ಹೊನ್ನಾಳಿ ಕ್ಷೇತ್ರ ಇವರು ಮಾತನಾಡುತ್ತಾ ಹೋದ ಸಾರಿ 2011ರ ಜನಗಣತಿ ಆಧಾರದ ಮೇಲೆಯೇ ಅನುದಾನ ನೀಡಲಾಗಿದೆಯೆಂದು, ಇದಕ್ಕೆ ಉತ್ತರ ನೀಡಿದರು.

ಇದಕ್ಕೆ ಮಂಡಳಿಯ ಕಾರ್ಯದರ್ಶಿಯವರು ಮಾತನಾಡುತ್ತಾ ಹೋದಸಾರಿ ಏನಿದೆಯೋ ಅದನ್ನೇ ಈಗ ಅನುಸರಿಸುತ್ತಿದ್ದೇವೆಂದರು. ಇದಕ್ಕೆ ಸಭೆಯು ಒಪ್ಪಿಗೆ ನೀಡಿತು.

ಮುಂದುವರೆದು ಮಂಡಳಿಯ ಕಾರ್ಯದರ್ಶಿಗಳು ಮಾತನಾಡುತ್ತಾ ಇದು ಬೆರಳಚ್ಚು ತಪ್ಪಿನಿಂದಾಗಿರುತ್ತದೆ. ಚೆಕ್ ಮಾಡಿ ವೆರಿಫೈ ಮಾಡಿ ತಮಗೆ ಕನ್‌ಫರ್ಮ್ ಮಾಡುವುದಾಗಿ ಅದನ್ನು ಸರಿಪಡಿಸಿ ತಮಗೆ ತಿಳಿಸುವುದಾಗಿ ಹಾಗೂ ಹೋದ ಸಾರಿ ಏನು 2011ರ ಜನಗಣತಿ ಆಧಾರದ ಮೇಲೆ ವಿ.ಘ.ಯೋ. ಮತ್ತು ಗಿ.ಉ.ಯೋ. ಲೆಕ್ಕ ಶೀರ್ಷಿಕೆಯಡಿ ಅನುದಾನವ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಅಧಿನಿಯಮ, 2013ರಂತೆ ಜನಸಂಖ್ಯೆ ಆಧಾರದ ಮೇಲೆ ಪ್ರತೀ ವಿಧಾನ ಸಭಾ ಕ್ಷೇತ್ರಗಳಿಗೆ ಮಾತ್ರ ಹಂಚಿಕೆ ಮಾಡಲಾಗಿದೆಯೆಂದರು. ಇದಕ್ಕೆ ಎಲ್ಲಾ ಸದಸ್ಯರು ತಮ್ಮ ಒಪ್ಪಿಗೆಯನ್ನು ಸೂಚಿಸಿದರು.

**ನಿರ್ಣಯ:4:- 2015-16ನೇ ಸಾಲಿನಲ್ಲಿ ವಿ.ಘ.ಯೋ. / ಗಿ.ಉ.ಯೋ. ಲೆಕ್ಕ ಶೀರ್ಷಿಕೆಯಡಿ ಜನಗಣತಿ ಆಧಾರದ ಮೇಲೆ ಅನುದಾನ ಹಂಚಿಕೆ ಮಾಡಿದಂತೆಯೇ 2016-17ನೇ ಸಾಲಿಗೆ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೆ ಮಾತ್ರ ಹಂಚಿಕೆ ಮಾಡಲು ನಿರ್ಣಯಿಸಲಾಯಿತು.**

**ವಿಷಯ:4:- ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸತಕ್ಕ ಇತರೆ ವಿಷಯಗಳು.**

ಮಂಡಳಿಯ ಉಪ ಕಾರ್ಯದರ್ಶಿಯವರು ಮಾತನಾಡುತ್ತಾ ಶ್ರೀ ಮಾಂಕಾಳ್ ಎಸ್.ವೈದ್ಯ, ಮಾನ್ಯ ಶಾಸಕರು, ಭಟ್ಕಳ ವಿಧಾನಸಭಾ ಕ್ಷೇತ್ರ ಇವರು ಭಟ್ಕಳ ತಾಲ್ಲೂಕು ಮಾರುಕೇರಿ ಪಂ: ಕೀತ್ರೆ ರಾಮಬಾಳು ಸೇತುವೆ ನಿರ್ಮಾಣ. ಎಸ್.ಟಿ. ಕುಟುಂಬದವರು ವಾಸ ಮಾಡುತ್ತಿರುವ ಗ್ರಾಮಕ್ಕೆ ಸಂಪರ್ಕ ಸೇತುವೆ ನಿರ್ಮಾಣ ಅಂದಾಜು ರೂ. 1.00 ಕೋಟಿಯ ಕಾಮಗಾರಿಯನ್ನು ಮಂಡಳಿ ವತಿಯಿಂದ ಅನುಷ್ಠಾನಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಿದೆಯೆಂದರು.

ಶ್ರೀ ಯು.ಬಿ.ಬಣಕಾರ್, ಮಾನ್ಯ ಶಾಸಕರು, ಹಿರೇಕೆರೂರು ವಿಧಾನ ಸಭಾ ಕ್ಷೇತ್ರ ಇವರು ಮಾತನಾಡುತ್ತಾ ಈ ವಿಷಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಬಂದಿರುವ ವಿಷಯವಾಗಿರುವುದರಿಂದ ಅಧ್ಯಕ್ಷರ ವಿವೇಚನಾ ನಿಧಿಯಡಿ ಅನುದಾನ ನೀಡಲು ನಮ್ಮದೇನು ಅಭ್ಯಂತರವಿಲ್ಲ. ಆಗ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು, ಹಾಗಾದರೆ ನಾವುಗಳೆಲ್ಲರೂ ಒಂದೊಂದು ಪ್ರಸ್ತಾವನೆ ಕೊಡುತ್ತೇವೆ. ಎಲ್ಲರಿಗೂ ಅದೇರೀತಿ ಕೊಡಿ ಎಂದರು. ಮುಂದುವರೆದು ಮಾನ್ಯ ಎಲ್ಲಾ ಶಾಸಕರುಗಳು ಈ ವಿಷಯ ತೆಗೆದುಕೊಳ್ಳುವುದು ಬೇಡವೆಂದು ನಿರ್ಣಯಿಸಿದರು.

ಶ್ರೀ ಅರವಿಂದ ಚಂದ್ರಕಾಂತ ಪಾಟೀಲ್, ಮಾನ್ಯ ಶಾಸಕರು, ಖಾನಾಪುರ ಕ್ಷೇತ್ರ ಹಾಗೂ ಶ್ರೀ ಜಿ.ಹೆಚ್.ಶ್ರೀನಿವಾಸ್, ಮಾನ್ಯ ಶಾಸಕರು, ತರೀಕೆರೆ ವಿಧಾನಸಭಾ ಕ್ಷೇರು ಇವರುಗಳು ಮಾತನಾಡುತ್ತಾ ಈಗ ಆ ರೀತಿ ನೀವು ಹಂಚಿಕೆ ಮಾಡುವುದು ಸೂಕ್ತವಲ್ಲ. ಏಕೆಂದರೆ ಶಾಸಕರುಗಳಿಗೂ ಕೂಡ ಅವರದೇ ಆದಂತಹ ಕ್ಷೇತ್ರದ ಜವಾಬ್ದಾರಿ ಇರುತ್ತದೆ. ನಾವೂ ಕೂಡ ರೂ. 2.00 ಕೋಟಿಗೆ ಪ್ರಸ್ತಾವನೆ ಕೊಡುತ್ತೇವೆ. ನಿಮ್ಮ ಅಧ್ಯಕ್ಷರ ಕೋಟಾದಲ್ಲಿ ಕೊಡಿ ಎಂದರೆ ಕೊಡುತ್ತೀರ. ಅದು ಬೇಡ. ಇರತಕ್ಕಂತಹ ಹಣವನ್ನು ಕ್ಷೇತ್ರವಾರು ಸಮನಾಗಿ ಹಂಚಿ ಎಂದರು. ಇದಕ್ಕೆ ಎಲ್ಲಾ ಶಾಸಕರು ಒಪ್ಪಿಗೆ ಸೂಚಿಸಿದರು. ಡಾ: ನಂಜುಂಡಪ್ಪ ವರದಿಯಂತೆ ಅತ್ಯಂತ ಹಿಂದುಳಿದ ತಾಲ್ಲೂಕು ಎಂದು ಬೇರೆ ಇಲಾಖೆಯಲ್ಲಿ ವಿಶೇಷ ಅನುದಾನವನ್ನು ಕೊಡುತ್ತಾರೆ. ಅತ್ಯಂತ ಹಿಂದುಳಿದ ತಾಲ್ಲೂಕು ಎಂದು ಅಧಿಕೃತವಾಗಿ ಡಾ: ನಂಜುಂಡಪ್ಪ ವರದಿಯು ಸರ್ಕಾರದ ಮುಂದಿದೆ. ಅದಕ್ಕೆ ನೀವು ಕೂಡ ಮಂಡಳಿಯಲ್ಲಿ ಸ್ವಲ್ಪ ಹೆಚ್ಚಿನ ಅನುದಾನವನ್ನು ಕೊಡಿ ಎಂದರು.

**ನಿರ್ಣಯ:5:- ಶ್ರೀ ಮಾಂಕಾಳ್ ಎಸ್.ವೈದ್ಯ, ಮಾನ್ಯ ಶಾಸಕರು, ಭಟ್ಕಳ ಕ್ಷೇತ್ರ ಇವರ ಪ್ರಸ್ತಾವನೆಯನ್ನು ಸಭೆಯು ಸರ್ವಾನುಮತದಿಂದ ತಿರಸ್ಕರಿಸಿತು.**

ಶ್ರೀ ಚಿಕ್ಕಮಾದು, ಮಾನ್ಯ ಶಾಸಕರು, ಹೆಚ್.ಡಿ.ಕೋಟೆ ಕ್ಷೇತ್ರ ಇವರು ಮಾತನಾಡುತ್ತಾ ಹಿಂದುಳಿದ, ಅತೀ ಹಿಂದುಳಿದ, ಅತ್ಯಂತ ಹಿಂದುಳಿದ ತಾಲ್ಲೂಕುಗಳೇನಿವೆ ಅವು ಡಾ: ನಂಜುಂಡಪ್ಪ ವರದಿಯಲ್ಲಿ ಇವೆ. **ಸರ್ಕಾರ ಇದನ್ನೆಲ್ಲಾ ಜಾರಿಗೆ** ತಂದಿದೆ. ಅತ್ಯಂತ ಹಿಂದುಳಿದ ತಾಲ್ಲೂಕುಗಳು ಯಾವ್ಯಾವು ಇವೆ. ಆ ಮಾರ್ಗಸೂಚಿ **ಪ್ರಕಾರ ಆ ತಾಲ್ಲೂಕುಗಳಿಗೆ** ಅನುದಾನ ಬಿಡುಗಡೆ ಮಾಡಲು ಮಾನ್ಯ ಅಧ್ಯಕ್ಷರನ್ನು ಕೋರಿದರು. ಅದಕ್ಕೆ ಮಾನ್ಯ ಅಧ್ಯಕ್ಷರು ಪರಿಶೀಲಿಸುವುದಾಗಿ **ತಿಳಿಸಿದರು.**

ಶ್ರೀ ವೈ.ಎಸ್.ವಿ.ದತ್ತ, ಮಾನ್ಯ ಶಾಸಕರು, ಕಡೂರು ವಿಧಾನಸಭಾ ಕ್ಷೇತ್ರ ಇವರು ಮಾತನಾಡುತ್ತಾ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಸಮ ಪ್ರಮಾಣದಲ್ಲಿ ಅನುದಾನ ಹಂಚಿಕೆ ಮಾಡುವುದು ಸರಿಯಲ್ಲ. ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕುಗಳಿಗೆ ಹೆಚ್ಚು ಅನುದಾನ ಸಿಗಬೇಕು. ಬರಪೀಡಿತ ಪ್ರದೇಶಗಳಿಗೆ ಹೆಚ್ಚು ಅನುದಾನ ಸಿಗಬೇಕು ಎಂದು ಒತ್ತಾಯ ಮಾಡಿದರು.

ಶ್ರೀ ಡಿ.ಎನ್.ಜೀವರಾಜ್, ಮಾನ್ಯ ಶಾಸಕರು, ಶೃಂಗೇರಿ ವಿಧಾನಸಭಾ ಕ್ಷೇತ್ರ ಇವರು ಮಾನ್ಯ ಅಧ್ಯಕ್ಷರನ್ನುದ್ದೇಶಿಸಿ ಮಾತನಾಡುತ್ತಾ ಇದು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಸಭೆ ಆಗಿದ್ದು, ಎಲ್ಲಾ ಕಡೆ ಬರ ಎಂದು ಡಿಕ್ಲೇರ್ ಆಗಿರುವಾಗ ಈ ಸಭೆಯಲ್ಲಿ ಬರದ ವಿಚಾರದ ಬಗ್ಗೆ ಚರ್ಚೆ ಮಾಡಿ ಸಮಯ ಕಳೆಯುವುದು ಬೇಡವೆಂದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಈಗ ಮಾನ್ಯ ಶಾಸಕರು ಹೇಳಿದ ಹಾಗೆ ಬರದ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ಎಲ್ಲೆಲ್ಲಿ ಬರ ಇದೆ ಕಾನೂನಿನಲ್ಲಿ ಏನು ಇದೆ ಅದಕ್ಕೆ ಹೆಚ್ಚು ಒತ್ತು ಕೊಡಲು ತಿಳಿಸಿದರು.
ಮುಂದುವರೆದು ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಎಲ್ಲರಿಗೂ ಸಮಾನವಾಗಿ ನಾವು ಅನುದಾನವನ್ನು ಹಂಚಿಕೆ ಮಾಡಿದ್ದೇವೆ. ನಿಮಗೆ ಎಲ್ಲಿ ಆದ್ಯತೆ ಕೊಡಬೇಕು ಅನ್ನಿಸುತ್ತದೋ ಎಲ್ಲಿ ಬರದ ಪ್ರದೇಶ ಇದೆಯೋ, ಅಲ್ಲಿಗೆ ಆದ್ಯತೆಯನ್ನು ಕೊಟ್ಟು ಕಾಮಗಾರಿ ಪ್ರಸ್ತಾವನೆಯನ್ನು ಕೊಡಲು ಕೋರಿದರು.

ಶ್ರೀ ಗೋ.ಮಧುಸೂದನ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ದಕ್ಷಿಣ ಪದವೀಧರ ಕ್ಷೇತ್ರ ಇವರು ಮಾತನಾಡುತ್ತಾ ಇಲ್ಲಿಯವರೆಗೆ ವಿಧಾನ ಪರಿಷತ್ ಸದಸ್ಯರುಗಳಿಗೆ ಅನುದಾನವನ್ನು ಕೊಟ್ಟಿರಲಿಲ್ಲ. ಆದರೆ ಕಳೆದ ಸಾಲಿನಿಂದ ವಿಧಾನ ಪರಿಷತ್ ಸದಸ್ಯರುಗಳಿಗೂ ಸಹ ಅನುದಾನ ಕೊಡಲಿಕ್ಕೆ ಪ್ರಾರಂಭ ಮಾಡಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳು. ಸಮಾನವಾಗಿ ಕೊಡುತ್ತಿಲ್ಲವೆಂದು ಅಸಮಾಧಾನವಿದೆ. ಸ್ವಲ್ಪವಾದರೂ ಕೊಟ್ಟಿದ್ದೀರಲ್ಲವೆಂದು ಧನ್ಯವಾದವನ್ನು ಹೇಳುತ್ತೇನೆ. 2ನೆಯದಾಗಿ ಈಗ ಮಂಡಳಿಯಿಂದ ಕೊಡುತ್ತಿರುವಂತಹ ಹಣ ನಮ್ಮ ಕ್ಷೇತ್ರಕ್ಕೆ ಬರುವಂತಹ ಹಾಸನ ಜಿಲ್ಲೆ, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಹಾಗೂ ಹನೂರು ತಾಲ್ಲೂಕು ಮತ್ತು ಮೈಸೂರು ಜಿಲ್ಲೆಗೆ ಬರುವಂತಹ ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ ತಾಲ್ಲೂಕುಗಳಿಗೆ ಉಪಯೋಗಿಸಬೇಕಾಗಿದೆ. ಈ ಭಾಗಗಳಲ್ಲಿ ಅತ್ಯಂತ ಕಷ್ಟವಾದಂತಹ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಈಗ ಬಿಡುಗಡೆ ಮಾಡಬೇಕೆಂದಿರುವ ಹಣವನ್ನು ವರ್ಷದ ತನಕ ಕೊಡುವ ಬದಲು ಈಗಲೇ ನಾವು ಕೊಡುವಂತಹ ಕಾಮಗಾರಿಗಳ ಪ್ರಸ್ತಾವನೆಯನ್ನು ಕೂಡಲೇ ಮಂಡಳಿಯಿಂದ ಅನುಮೋದನೆ ನೀಡಿದರೆ ನಾವು ಶ್ರೀ ಕ್ಷೇತ್ರ ಧರ್ಮಸ್ಥಳ ಅಭಿವೃದ್ಧಿ ಸಂಸ್ಥೆಯವರ ಹೊಂದಾಣಿಕೆ ಮೊತ್ತದೊಂದಿಗೆ ಮಂಡಳಿಯ ಹಣವನ್ನು ಸೇರಿಸಿ ಒಂದು ವಾರದಲ್ಲೇ ನಾವು ಕುಡಿಯುವ ನೀರಿನ ಪ್ರಸ್ತಾನೆಯನ್ನು ಕೊಡುತ್ತೇವೆ. ನೀವು ಕೂಡಲೇ ಹಣವನ್ನು ಬಿಡುಗಡೆ ಮಾಡಿದರೆ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವ ಗ್ರಾಮಗಳಿಗೆ ಪರಿಹಾರ ಮಾಡಿದಂತಾಗುತ್ತದೆಂದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಮಂಡಳಿ ವತಿಯಿಂದ ನಿಧಾನದ ಪ್ರಶ್ನೆಯೇ ಇಲ್ಲ. ನಿಮ್ಮಿಂದ ಎಷ್ಟು ಬೇಗ ಪ್ರಸ್ತಾವನೆ ಬರುತ್ತದೋ ಅಷ್ಟೇ ಬೇಗ ನಾವು ಅನುಮೋದನೆ ನೀಡುತ್ತೇವೆಂದರು.

ಶ್ರೀ ಗೋ.ಮಧುಸೂದನ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ದಕ್ಷಿಣ ಪದವೀಧರ ಕ್ಷೇತ್ರ ಇವರು ಮುಂದುವರೆದು ಮಾತನಾಡುತ್ತಾ ಮಾನ್ಯ ಅಧ್ಯಕ್ಷರನ್ನುದ್ದೇಶಿಸಿ ವಿಧಾನ ಪರಿಷತ್ ಸದಸ್ಯರುಗಳಿಗೆ ಎಷ್ಟು ಹಣವನ್ನು ಕೊಡುತ್ತಿದ್ದೀರೆಂದರು.

ಶ್ರೀ ಬೆಕ್ಕಮಾರು, ಮಾನ್ಯ ಶಾಸಕರು, ವಿಧಾನಸಭಾ ಕ್ಷೇತ್ರ ಇವರು ಮಾತನಾಡುತ್ತಾ ನಾವು ಜನರಿಗೆ ನೇರವಾಗಿ ಉತ್ತರ ಕೊಡಬೇಕಾಗಿದೆ. ವಿಧಾನ ಪರಿಷತ್ ಸದಸ್ಯರುಗಳಿಗೆ ಕೊಡಿ. ನಾವು ಕೊಡುವುದು ಬೇಡವೆಂದು ಹೇಳುತ್ತಿಲ್ಲ. ಸ್ವಲ್ಪ ಕಡಿಮೆ ಅನುದಾನಲ ಕೊಡಿ, ವಿಧಾನಸಭಾ ಕ್ಷೇತ್ರಗಳಿಗೆ ಹೆಚ್ಚಿಗೆ ಅನುದಾನ ಕೊಡಿ. ನಾವು ಜನರಿಗೆ ನೇರವಾಗಿ ಉತ್ತರ ಕೊಡಬೇಕಾಗುತ್ತದೆಂದರು. ಶ್ರೀ ಡಿ.ಹೆಚ್.ಶ್ರೀನಿವಾಸ್, ಮಾನ್ಯ ಶಾಸಕರು, ತರೀಕೆರೆ ವಿಧಾನಸಭಾ ಕ್ಷೇತ್ರ ಇವರು ಮಾನ್ಯ ಅಧ್ಯಕ್ಷರನ್ನುದ್ದೇಶಿಸಿ ಮಾತನಾಡುತ್ತಾ ವಿಧಾನ ಪರಿಷತ್ ಸದಸ್ಯರುಗಳು ತಮ್ಮ ಅನುದಾನದಲ್ಲಿ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೂ ಸಮನಾಗಿ ಹಂಚಲಿಕ್ಕೆ ಹೇಳಿ ಎಂದರು.

ಶ್ರೀ ಅರೆಬೈಲು ಶಿವರಾಮ್ ಹೆಬ್ಬಾರ್, ಮಾನ್ಯ ಶಾಸಕರು, ಯಲ್ಲಾಪುರ ವಿಧಾನಸಭಾ ಕ್ಷೇತ್ರ ಇವರು ಮಾತನಾಡುತ್ತಾ ಯಾವುದೇ ಬೇರೆ ಮಂಡಳಿಯಲ್ಲಿಯೂ ವಿಧಾನ ಪರಿಷತ್ ಸದಸ್ಯರುಗಳಿಗೆ ಅನುದಾನ ನೀಡಿಲ್ಲ. ಈ ಹಿಂದೆನು ಈ ರೀತಿ ಇರಲಿಲ್ಲ. ಹೋದ ವರ್ಷದಿಂದ ಈ ಮಂಡಳಿಯಲ್ಲಿ ಮಾತ್ರ ವಿಶೇಷವಾಗಿ ಹಂಚಿಕೆ ಮಾಡುತ್ತಿದ್ದೀರೆಂದರು.

ಅದಕ್ಕೆ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದಂತಹ ಸದಸ್ಯರುಗಳಿಗೂ ಕಾಮಗಾರಿ ಕೊಡುವ ಅಗತ್ಯವಿರುತ್ತದೆಂದರು. ಮುಂದುವರೆದು ಎಲ್ಲಾ ಸದಸ್ಯರಲ್ಲಿ ಮನವಿ ಮಾಡುತ್ತಾ ಮಾನ್ಯ ಮುಖ್ಯಮಂತ್ರಿಗಳ ಬಳಿ ನಿಯೋಗ ಹೋಗೋಣ. ಇನ್ನು ಜಾಸ್ತಿ ಹಣವನ್ನು ಕೇಳೋಣವೆಂದರು.

ಶ್ರೀ ಅರವಿಂದ ಚಂದ್ರಕಾಂತ ಪಾಟೀಲ್, ಮಾನ್ಯ ಶಾಸಕರು, ಖಾನಾಪುರ ವಿಧಾನಸಭಾ ಕ್ಷೇತ್ರ ಇವರು ಮಾತನಾಡುತ್ತಾ ವಿಧಾನ ಸಭಾ ಸದಸ್ಯರುಗಳಿಗೆ ಅವರದೇ ಆದ ಒಂದು ಕ್ಷೇತ್ರ ಇರುತ್ತದೆ. ವಿಧಾನ ಪರಿಷತ್ ಸದಸ್ಯರುಗಳಿಗೆ ಒಂದು ಅಥವಾ ಎರಡು ಮೂರು ಜಿಲ್ಲೆಗಳು ಬರುತ್ತವೆ. ವಿಧಾನ ಪರಿಷತ್ ಸದಸ್ಯರುಗಳಿಗೂ ಸಹ ನಮಗೆ ಕೊಡುವ ಹಾಗೆ ಪ್ರತೀ ವರ್ಷ ರೂ.2.00 ಕೋಟಿ ಅನುದಾನವನ್ನು ಕೊಡುತ್ತಾರೆ. ಮಲೆನಾಡು ಅನ್ನುವ ಕಾರಣಕ್ಕೋಸ್ಕರ ಕ್ಷೇತ್ರಗಳಿಗೆ ಹಂಚಿಕೆ ಮಾಡುವ ಹಣವನ್ನು ವಿಧಾನ ಪರಿಷತ್ ಸದಸ್ಯರುಗಳಿಗೆ ಕೊಡುವುದು ಸೂಕ್ತವಲ್ಲವೆಂದರು. ಆದ್ದರಿಂದ ದಯಮಾಡಿ ಮಾನ್ಯ ವಿಧಾನ ಸಭಾ ಸದಸ್ಯರುಗಳಿಗೆ ಮಾತ್ರ ಎಂ.ಎ.ಡಿ.ಬಿ. ಹಣವನ್ನು ಹಂಚಿಕೆ ಮಾಡದಿರಲು ಕೋರಿದರು.

ಮಾನ್ಯ ಶಾಸಕರುಗಳೆಲ್ಲರೂ ಮಾತನಾಡುತ್ತಾ ಕ್ಷೇತ್ರದ ಜನತೆ ನಮ್ಮನ್ನು ನೇರವಾಗಿ ಪ್ರಶ್ನೆ ಮಾಡುತ್ತಾರೆ. ವಿಧಾನ ಪರಿಷತ್ ಸದಸ್ಯರುಗಳಿಗೆ ಯಾರೂ ಪ್ರಶ್ನೆ ಮಾಡುವುದಿಲ್ಲ. ಆದುದರಿಂದ ಯಾವುದೇ ಕಾರಣಕ್ಕೂ ವಿಧಾನ ಪರಿಷತ್ ಸದಸ್ಯರುಗಳಿಗೆ ಮಂಡಳಿಯಿಂದ ಅನುದಾನ ಕೊಡುವುದೇ ಬೇಡ ಎಂದು ಎಲ್ಲಾ ವಿಧಾನ ಸಭಾ ಸದಸ್ಯರುಗಳು ಒಕ್ಕೊರಲಿನಿಂದ ಒಪ್ಪಿಗೆ ಸೂಚಿಸಿದರು.

ಶ್ರೀ ಮೊಯಿದ್ದೀನ್ ಬಾವ, ಮಾನ್ಯ ಶಾಸಕರು, ಮಂಗಳೂರು (ನಗರ ಉತ್ತರ) ವಿಧಾನಸಭಾ ಕ್ಷೇತ್ರ ಇವರು ಮಾತನಾಡುತ್ತಾ ಎಂ.ಎ.ಡಿ.ಬಿ.ಯಿಂದ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಿಗೆ ಅನುದಾನ ನೀಡುವುದು ಬೇಡವೆಂದು ನಿರ್ಣಯ ಮಾಡಿ. ಮುಂದೆ ಆದೇಶ ಬಂದರೆ ಎಲ್ಲಾ ಮಂಡಳಿಯವರಿಗೂ ನ್ಯಾಯ ಸಲ್ಲುತ್ತದೆ. ಅದಕ್ಕೆ ನಾವೂ ಬದ್ಧರಾಗಿರುತ್ತೇವೆ. ದಯವಿಟ್ಟು ಯವುದೇ ಮಂಡಳಿಯಲ್ಲಿಲ್ಲದಂತಹ ಒಂದು ಈ ವ್ಯವಸ್ಥೆಯನ್ನು ತಾವು ತೆಗೆಯಬೇಕೆಂದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಮಾನ್ಯ ಸದಸ್ಯರುಗಳೆಲ್ಲರ ಸಲಹೆಯಂತೆ ಪ್ರತೀ ವಿಧಾನ ಸಭಾ ಕ್ಷೇತ್ರಕ್ಕೆ ಬಂಡವಾಳ ವೆಚ್ಚದಡಿ ರೂ.25.00 ಲಕ್ಷಗಳು ಹಾಗೂ ವಿ.ಘ.ಯೋ. / ಗಿ.ಉ.ಯೋ. ಲೆಕ್ಕ ಶೀರ್ಷಿಕೆಯಡಿ ಅನುದಾನವನ್ನು ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಅಧಿನಿಯಮ, 2011ರ ಜನಸಂಖ್ಯೆ ಆಧಾರದ ಮೇಲೆ ವಿಧಾನ ಸಭಾ ಕ್ಷೇತ್ರಗಳಿಗೆ ಮಾತ್ರ ಹಂಚಿಕೆ ಮಾಡಲು ಮತ್ತು ಈ ವರ್ಷಕ್ಕೆ ಅಂದರೆ 2016–7ನೇ ಸಾಲಿಗೆ ಮಾತ್ರ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಿಗೆ ಬಂಡವಾಳ ವೆಚ್ಚ ಶೀರ್ಷಿಕೆಯಡಿ ರೂ.10.00 ಲಕ್ಷಗಳಂತೆ ಹಂಚಿಕೆ ಮಾಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ನಿರ್ಣಯ:6:– 2016–17ನೇ ಸಾಲಿನ ಮಂಡಳಿಯ ವಾರ್ಷಿಕ ಕ್ರಿಯಾ ಯೋಜನೆಯ ಬಂಡವಾಳ ವೆಚ್ಚ ಶೀರ್ಷಿಕೆಯಡಿ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಿಗೆ ರೂ.10.00 ಲಕ್ಷಗಳನ್ನು ಹಾಗೂ ಲಭ್ಯವಿರುವ ಅನುದಾನವನ್ನು ಮಾನ್ಯ ವಿಧಾನ ಸಭಾ ಸದಸ್ಯರುಗಳಿಗೆ ಹಂಚಿಕೆ ಮಾಡಲು ಹಾಗೂ ಎಸ್.ಸಿ.ಪಿ / ಟಿ.ಎಸ್.ಪಿ. ಅನುದಾನವನ್ನು ಜನಸಂಖ್ಯೆ ಆಧಾರದ ಮೇಲೆ ವಿಧಾನ ಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಲು ಸಭೆಯು ನಿರ್ಣಯಿಸಿತು.**

ಅಧ್ಯಕ್ಷರು ಮಾನ್ಯ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ, ಈ ಸಭೆಗೆ ನೀವೆಲ್ಲರೂ ಒಳ್ಳೆಯ ಸಲಹೆ ಮತ್ತು ಆರೋಗ್ಯಕರವಾದ ಚರ್ಚೆ ನಡೆಸಿ ಸಭೆಯನ್ನು ನಡೆಸಿಕೊಟ್ಟಿದ್ದಕ್ಕೆ ಮಂಡಳಿಯ ಪರವಾಗಿ ತಮಗೆಲ್ಲರಿಗೂ ಅಭಿನಂದನೆಗಳನ್ನು ತಿಳಿಸುತ್ತಾ ಕಾಮಗಾರಿ ಪ್ರಸ್ತಾವನೆಯನ್ನು ಆದಷ್ಟು ಬೇಗನೆ ನೀಡಿ ಕಾರ್ಯಕ್ರಮ ಸುಗಮವಾಗಿ ನಡೆಯಲು ಸಹಕಾರಿಗಳಾಗಬೇಕಾಗಿ ಎಲ್ಲರಲ್ಲಿ ವಿನಂತಿ ಮಾಡಿ ಸಭೆಗೆ ವಂದಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Sudarshan G A

ಕಾರ್ಯದರ್ಶಿ,
ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ,
ಶಿವಮೊಗ್ಗ.

ಅಧ್ಯಕ್ಷರು,
ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ,
ಶಿವಮೊಗ್ಗ.

ದಿನಾಂಕ:29.04.2016ರಂದು ಮಾನ್ಯ ಅಧ್ಯಕ್ಷರು, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಶಿವಮೊಗ್ಗ ಇವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಸಭಾಂಗಣ, ರೂಂ.ನಂ.334, ಮೂರನೇ ಮಹಡಿ, ವಿಧಾನಸೌಧ, ಬೆಂಗಳೂರು ಇಲ್ಲಿ ಜರುಗಿದ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ 2016–17ನೇ ಸಾಲಿನ ಪ್ರಥಮ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಒಟ್ಟಾರೆ ಕೈಗೊಂಡ ನಿರ್ಣಯಗಳ ವಿವರ ಈ ಕೆಳಕಂಡಂತಿರುತ್ತದೆ.

---

ನಿರ್ಣಯ:1:– ದಿನಾಂಕ:12.06.2015ರಂದು ನಡೆದ ಮಂಡಳಿಯ ಸಭಾ ನಡವಳಿಗಳಿಗೆ ಮಂಡಳಿಯಿಂದ ತೆಗೆದುಕೊಂಡ ಅನುಸರಣಾ ಕ್ರಮಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ನಿರ್ಣಯ:2:– 2015–16ನೇ ಸಾಲಿನ ಮಂಡಳಿಯ ವಾರ್ಷಿಕ ಆಡಳಿತ ವರದಿಯನ್ನು ಸರ್ವ ಸದಸ್ಯರ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ನಿರ್ಣಯ:3:– 2016–17ನೇ ಸಾಲಿಗೆ ಮುಂದುವರೆದ ಕಾರ್ಯಕ್ರಮಕ್ಕೆ 2933.630 ಲಕ್ಷಗಳ ಕ್ರಿಯಾ ಯೋಜನೆಗೆ ಮತ್ತು ಹೊಸ ಕಾಮಗಾರಿಗಳ ಅನುಷ್ಠಾನಕ್ಕೆ ಲಭ್ಯವಿರುವ ಅನುದಾನ ರೂ.2993.790 ಲಕ್ಷಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

ನಿರ್ಣಯ:4:– 2015–16ನೇ ಸಾಲಿನಲ್ಲಿ ವಿ.ಘ.ಯೋ. / ಗಿ.ಉ.ಯೋ. ಲೆಕ್ಕ ಶೀರ್ಷಿಕೆಯಡಿ 2011ರ ಜನಗಣತಿ ಆಧಾರದ ಮೇಲೆ ಅನುದಾನ ಹಂಚಿಕೆ ಮಾಡಿದಂತೆಯೇ 2016–17ನೇ ಸಾಲಿಗೆ ವಿಧಾನ ಸಭಾ ಕ್ಷೇತ್ರಗಳಿಗೆ ಮಾತ್ರ ಹಂಚಿಕೆ ಮಾಡಲು ನಿರ್ಣಯಿಸಲಾಯಿತು.

ನಿರ್ಣಯ:5:– ಶ್ರೀ ಮಾಂಕಾಳ್ ಎಸ್.ವೈದ್ಯ, ಮಾನ್ಯ ಶಾಸಕರು, ಭಟ್ಕಳ ಕ್ಷೇತ್ರ ಇವರ ಪ್ರಸ್ತಾವನೆಯನ್ನು ಸಭೆಯು ಸರ್ವಾನುಮತದಿಂದ ತಿರಸ್ಕರಿಸಿತು.

ನಿರ್ಣಯ:6:– 2016–17ನೇ ಸಾಲಿನ ಮಂಡಳಿಯ ವಾರ್ಷಿಕ ಕ್ರಿಯಾ ಯೋಜನೆಯ ಬಂಡವಾಳ ವೆಚ್ಚ ಶೀರ್ಷಿಕೆಯಡಿ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಿಗೆ ರೂ.10.00 ಲಕ್ಷಗಳನ್ನು ಹಾಗೂ ಲಭ್ಯವಿರುವ ಅನುದಾನವನ್ನು ಮಾನ್ಯ ವಿಧಾನ ಸಭಾ ಸದಸ್ಯರುಗಳಿಗೆ ಹಂಚಿಕೆ ಮಾಡಲು ಹಾಗೂ ಎಸ್.ಸಿ.ಪಿ / ಟಿ.ಎಸ್.ಪಿ. ಅನುದಾನವನ್ನು ಜನಸಂಖ್ಯೆ ಆಧಾರದ ಮೇಲೆ ವಿಧಾನ ಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಲು ಸಭೆಯು ನಿರ್ಣಯಿಸಿತು.

Sudarshan G A
ಕಾರ್ಯದರ್ಶಿ,
ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ,
ಶಿವಮೊಗ್ಗ.

ಅಧ್ಯಕ್ಷರು,
ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ,
ಶಿವಮೊಗ್ಗ.

# ಅನುಬಂಧ

ದಿನಾಂಕ:29.04.2016 ರಂದು ಮಂಡಳಿಯ ಅಧ್ಯಕ್ಷರಾದ ಕು: ಬಿ.ಸಿ.ಗೀತಾ ರವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಸಭಾಂಗಣ, ಕೊಠಡಿಸಂಖ್ಯೆ:334, ವಿಧಾನ ಸೌಧ, ಬೆಂಗಳೂರು ಇಲ್ಲಿ ಜರುಗಿದ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಶಿವಮೊಗ್ಗದ 2016–17ನೇ ಸಾಲಿನ ಪ್ರಥಮ ಸರ್ವ ಸದಸ್ಯರ ಸಾಮಾನ್ಯ ಸಭೆಗೆ ಹಾಜರಾದ ಸದಸ್ಯರುಗಳ ಪಟ್ಟಿ.

| ಕ್ರ. ಸಂ. | ಶ್ರೀಯುತರುಗಳ ಹೆಸರು |
|---|---|
| 1 | ಕು.ಬಿ.ಸಿ.ಗೀತಾ, ಮಾನ್ಯ ಅಧ್ಯಕ್ಷರು, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ |
| 2 | ಶ್ರೀ ಸುದರ್ಶನ್ ಜಿ.ಎ. ಭಾ.ಅ.ಸೇ, ಕಾರ್ಯದರ್ಶಿಗಳು, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ |
| 3 | ಶ್ರೀ ಉಮೇಶ್ ವಿ.ಕತ್ತಿ, ಮಾನ್ಯ ಶಾಸಕರು, ಹುಕ್ಕೇರಿ ಕ್ಷೇತ್ರ |
| 4 | ಶ್ರೀ ಡಾ:ವಿಶ್ವನಾಥ ಐ ಪಾಟೀಲ್, ಮಾನ್ಯ ಶಾಸಕರು, ಬೈಲಹೊಂಗಲ ಕ್ಷೇತ್ರ |
| 5 | ಶ್ರೀ ಅರವಿಂದ ಚಂದ್ರಕಾಂತ ಪಾಟೀಲ್, ಮಾನ್ಯ ಶಾಸಕರು, ಖಾನಾಪುರ ಕ್ಷೇತ್ರ |
| 6 | ಶ್ರೀ ಸಂಜಯ್ ಬಿ.ಪಾಟೀಲ್, ಮಾನ್ಯ ಶಾಸಕರು, ಬೆಳಗಾವಿ (ಗ್ರಾ) ಕ್ಷೇತ್ರ |
| 7 | ಶ್ರೀ ಸಂಭಾಜೀರಾವ್ ಲಕ್ಷ್ಮಣ ಪಾಟೀಲ್, ಮಾನ್ಯ ಶಾಸಕರು, ಬೆಳಗಾವಿ (ದ) ಕ್ಷೇತ್ರ |
| 8 | ಶ್ರೀ ಫಿರೋಜ್ ಎನ್ ಶೇಟ್, ಮಾನ್ಯ ಶಾಸಕರು, ಬೆಳಗಾವಿ (ಉ) ಕ್ಷೇತ್ರ |
| 9 | ಶ್ರೀ ಎಸ್.ಜಯಣ್ಣ, ಮಾನ್ಯ ಶಾಸಕರು, ಕೊಳ್ಳೇಗಾಲ ಕ್ಷೇತ್ರ |
| 10 | ಶ್ರೀ ಡಿ.ಎನ್.ಜೀವರಾಜ್, ಮಾನ್ಯ ಶಾಸಕರು, ಶೃಂಗೇರಿ ಕ್ಷೇತ್ರ |
| 11 | ಶ್ರೀ ವೈ.ಎಸ್.ವಿ.ದತ್ತ, ಮಾನ್ಯ ಶಾಸಕರು, ಕಡೂರು ಕ್ಷೇತ್ರ |
| 12 | ಶ್ರೀ ಜಿ.ಹೆಚ್.ಶ್ರೀನಿವಾಸ, ಮಾನ್ಯ ಶಾಸಕರು, ತರೀಕೆರೆ ಕ್ಷೇತ್ರ |
| 13 | ಶ್ರೀ ವಡ್ನಾಳ್ ರಾಜಣ್ಣ, ಮಾನ್ಯ ಶಾಸಕರು, ಚನ್ನಗಿರಿ ಕ್ಷೇತ್ರ |
| 14 | ಶ್ರೀ. ಕೆ.ಶಿವಮೂರ್ತಿ, ಮಾನ್ಯ ಶಾಸಕರು, ಮಾಯಕೊಂಡ ಕ್ಷೇತ್ರ |
| 15 | ಶ್ರೀ ಡಿ.ಜಿ.ಶಾಂತನಗೌಡ, ಮಾನ್ಯ ಶಾಸಕರು, ಹೊನ್ನಾಳಿ ಕ್ಷೇತ್ರ |
| 16 | ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ, ಮಾನ್ಯ ಶಾಸಕರು, ಹಾವೇರಿ ಕ್ಷೇತ್ರ |
| 17 | ಶ್ರೀ ಯು.ಬಿ.ಬಣಕಾರ್, ಮಾನ್ಯ ಶಾಸಕರು, ಹಿರೇಕೆರೂರು ಕ್ಷೇತ್ರ |
| 18 | ಶ್ರೀ ಬಸವರಾಜ ನೀಲಪ್ಪ ಶಿವಣ್ಣನವರ್, ಮಾನ್ಯ ಶಾಸಕರು, ಬ್ಯಾಡಗಿ ಕ್ಷೇತ್ರ |
| 19 | ಶ್ರೀ ಎಸ್.ಅಂಗಾರ, ಮಾನ್ಯ ಶಾಸಕರು, ಸುಳ್ಯ ಕ್ಷೇತ್ರ |
| 20 | ಶ್ರೀ ಬಿ.ಎ.ಮೊಹಿದ್ದೀನ್ ಬಾವಾ, ಮಾನ್ಯ ಶಾಸಕರು, ಮಂಗಳೂರು(ಉ) ಕ್ಷೇತ್ರ |
| 21 | ಶ್ರೀ ಜೆ.ಆರ್.ಲೋಬೋ, ಮಾನ್ಯ ಶಾಸಕರು, ಮಂಗಳೂರು(ದ) ಕ್ಷೇತ್ರ |
| 22 | ಶ್ರೀ ಎಸ್.ಚಿಕ್ಕಮಾದು, ಮಾನ್ಯ ಶಾಸಕರು, ಹೆಚ್.ಡಿ.ಕೋಟೆ ಕ್ಷೇತ್ರ |
| 23 | ಶ್ರೀ ಕೆ.ಬಿ.ಪ್ರಸನ್ನಕುಮಾರ್, ಮಾನ್ಯ ಶಾಸಕರು, ಶಿವಮೊಗ್ಗ ಕ್ಷೇತ್ರ |
| 24 | ಶ್ರೀ ಅರಬೈಲು ಶಿವರಾಮ ಹೆಬ್ಬಾರ್, ಮಾನ್ಯ ಶಾಸಕರು, ಯಲ್ಲಾಪುರ ಕ್ಷೇತ್ರ |
| 25 | ಶ್ರೀ ಜಿ.ಮಧುಸೂಧನ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ದಕ್ಷಿಣ ಪದವೀಧರ ಕ್ಷೇತ್ರ |
| 26 | ಶ್ರೀ ಆರ್.ಪ್ರಸನ್ನಕುಮಾರ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ಸ್ಥಳೀಯ ಸಂಸ್ಥೆಗಳ ಕ್ಷೇತ್ರ |
| 27 | ಶ್ರೀ ವಿವೇಕ್ ರಾವ್ ಪಾಟೀಲ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ಸ್ಥಳೀಯ ಸಂಸ್ಥೆಗಳ ಕ್ಷೇತ್ರ |
| 28 | ಶ್ರೀ ಎಂ.ಕೆ.ಪ್ರಾಣೇಶ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ಸ್ಥಳೀಯ ಸಂಸ್ಥೆಗಳ ಕ್ಷೇತ್ರ |
| 29 | ಶ್ರೀ ದಿನಕರ್, ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಉಡುಪಿ |